ಕೊಪ್ಪಳ ಜಿಲ್ಲೆ			
1	ಎನ್‌ಎಲ್‌ಸಿಸಿ ಕೊಪ್ಪಳ		
2	ಎನ್‌ಎಲ್‌ಸಿಸಿ ಯಲಬುರ್ಗಾ		2
ಯಾದಗಿರಿ ಜಿಲ್ಲೆ			
1	ಎನ್‌ಎಲ್‌ಸಿಸಿ ಸುರಪುರ		1
			80
	ನಗರ		197
	ಗ್ರಾಮೀಣ		276
	ಒಟ್ಟು		

ಪಶುವೈದ್ಯಕೀಯ ಆಸ್ಪತ್ರೆ ಹಾಗೂ ಸಿಬ್ಬಂದಿಗಳ ವಿವರ

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ 36 : (6)

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ)

ಅ) ಹಳಿಯಾಳ–ಜೊಯಿಡಾ ತಾಲ್ಲೂಕಿನಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ಹಳಿಯಾಳ–ಜೊಯಿಡಾ ತಾಲ್ಲೂಕಿನಲ್ಲಿರುವ ಪಶು ಆಸ್ಪತ್ರೆಗಳಿಗೆ ಕಟ್ಟಡ, ಸಿಬ್ಬಂದಿ ಹಾಗೂ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; (ಅಂಕಿ ಅಂಶಗಳ ಸಮೇತ ವಿವರ ನೀಡುವುದು)

ಇ) ಜೊಯಿಡಾ–ಹಳಿಯಾಳ ತಾಲ್ಲೂಕಿನಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರಾರಂಭಿಸಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು; (ವಿವರ ನೀಡುವುದು)

ಈ) ಜೊಯಿಡಾ–ಹಳಿಯಾಳ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರಾರಂಭ ಮಾಡಲಾಗುವ ಪಶು ಸಂಗೋಪನೆ ಕೇಂದ್ರಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

ಉ) ಜೊಯಿಡಾ–ಹಳಿಯಾಳ ತಾಲ್ಲೂಕು ಕೇಂದ್ರಗಳಲ್ಲಿ ಆಸ್ಪತ್ರೆ, ಕಟ್ಟಡ ಹಾಗೂ ಸಿಬ್ಬಂದಿಯ ವಸತಿ ಗೃಹಗಳು ದುಸ್ಥಿತಿಯಲ್ಲಿದ್ದು, ಸುಸ್ಥಿತಿಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು

ಊ) ಜೊಯಿಡಾ–ಹಳಿಯಾಳ ತಾಲ್ಲೂಕಿನಲ್ಲಿ ಇರುವ ಒಟ್ಟು ಪಶುಗಳ ಸಂಖ್ಯೆ ಎಷ್ಟು; (ಜಾತಿ ವರ್ಗಗಳವಾರು ವಿವರ ನೀಡುವುದು)

ಋ) ಕಳೆದ 3 ವರ್ಷಗಳಲ್ಲಿ ಪಶು ಚಿಕಿತ್ಸಾಲಯದ ವೈದ್ಯರುಗಳು ಪಶುಗಳಿಗೆ ನೀಡಿದ ಚಿಕಿತ್ಸೆ ಹಾಗೂ ಖಾಯಿಲೆಗಳ ವಿವರಗಳನ್ನು ನೀಡುವುದು.

ಋೂ) ಕಳೆದ 3 ವರ್ಷಗಳಲ್ಲಿ ಮರಣ ಹೊಂದಿರುವ ಪಶುಗಳು ವಿವರಗಳು ಹಾಗೂ ಅವು ಯಾವ ಖಾಯಿಲೆಯಿಂದ ಮರಣ ಹೊಂದಿವೆ ಎಂಬ ಬಗ್ಗೆ ವಿವರ ಒದಗಿಸುವುದು

ಎ) ಜೊಯಿಡಾ–ಹಳಿಯಾಳ ತಾಲ್ಲೂಕಿನಲ್ಲಿ ಒಟ್ಟು ಹಾಲಿನ ಉತ್ಪಾದನೆ ಎಷ್ಟು; ಡೈರಿಗಳಿಗೆ ಸರಬರಾಜಾಗುವ ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾಗುವ ಹಾಲಿನ ಪ್ರಮಾಣವೆಷ್ಟು; (ವಿವರ ನೀಡುವುದು)

ಏ) ಜೊಯಿಡಾ–ಹಳಿಯಾಳ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಹಾಲಿಗಾಗಿ ಸರ್ಕಾರದಿಂದ ನೀಡಲಾಗಿರುವ ಸಹಾಯ ಧನ ಎಷ್ಟು? (ವರ್ಷವಾರು ವಿವರ ನೀಡುವುದು).

ಶ್ರೀ ರೇವೂನಾಯಕ್ ಬೆಳವಾಡಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ
ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು.)

ಅ) ಹಳಿಯಾಳ–ಜೋಯಿಡಾ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳು:

ಕ್ರ.ಸಂ.	ಪಶುವೈದ್ಯ ಸಂಸ್ಥೆ	
1	ಪಶು ಆಸ್ಪತ್ರೆ	03
2	ಸಂಚಾರಿ ಪಶು ಚಿಕಿತ್ಸಾಲಯಗಳು	02
3	ಪಶು ಚಿಕಿತ್ಸಾಲಯಗಳು	14
4	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	03
5	ತೀವ್ರ ತಳಿ ಅಭಿವೃದ್ಧಿ ಘಟಕಗಳು	05
	ಒಟ್ಟು	27

ಅ) (1) ಹಳಿಯಾಳ–ಜೊಯಿಡಾ ತಾಲ್ಲೂಕುಗಳಲ್ಲಿ ಒಟ್ಟು 27 ಪಶುವೈದ್ಯಕೀಯ ಸಂಸ್ಥೆಗಳಿದ್ದು, 23 ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳಿದ್ದು, ಇನ್ನುಳಿದ 4 ಸಂಸ್ಥೆಗಳ ಪಂಚಾಯತ್ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

(2)ಹಳಿಯಾಳ ತಾಲ್ಲೂಕಿನ ಪಶು ಆಸ್ಪತ್ರೆಯಲ್ಲಿನ ಸಿಬ್ಬಂದಿಯ ವಿವರ:

ಹುದ್ದೆಗಳ ವಿವರ	ಮಂಜೂರು ಹುದ್ದೆ	ಭರ್ತಿ ಹುದ್ದೆ	ಖಾಲಿ ಹುದ್ದೆ
ಸಹಾಯಕ ನಿರ್ದೇಶಕರು	2	1	1
ಪಶುವೈದ್ಯಾಧಿಕಾರಿ	11	3	8
ಜಾನುವಾರು ಅಧಿಕಾರಿ	1	1	–
ಹಿರಿಯ ಪಶುವೈದ್ಯ ಪರೀಕ್ಷಕರು	0	0	1
ಪಶುವೈದ್ಯ ಪರೀಕ್ಷಕರು	11	11	–
ಪಶುವೈದ್ಯ ಸಹಾಯಕರು	4	1	3
ದ್ವಿತೀಯ ದರ್ಜೆ ಸಹಾಯಕರು	1	1	–
ವಾಹನ ಚಾಲಕರು (ಸಂಪಚಿ)	1	–	1
ಡಿ–ದರ್ಜೆ ನೌಕರರು	25	9	16
ಒಟ್ಟು	**62**	**32**	**30**

ಜೋಯಿಡಾ ತಾಲ್ಲೂಕಿನ ಪಶು ಆಸ್ಪತ್ರೆಯಲ್ಲಿನ ಸಿಬ್ಬಂದಿಯ ವಿವರ

ಹುದ್ದೆಗಳ ವಿವರ	ಮಂಜೂರು ಹುದ್ದೆ	ಭರ್ತಿ ಹುದ್ದೆ	ಖಾಲಿ ಹುದ್ದೆ
ಸಹಾಯಕ ನಿರ್ದೇಶಕರು	1	–	1
ಪಶುವೈದ್ಯಾಧಿಕಾರಿ	6	3	3

ಹಿರಿಯ ಪಶುವೈದ್ಯ ಪರೀಕ್ಷಕರು	6	3	3
ಪಶುವೈದ್ಯ ಪರೀಕ್ಷಕರು	1	1	0
ವಾಹನ ಚಾಲಕರು (ಸಂಪಚಿ)	1	1	0
ಡಿ– ದರ್ಜೆ ನೌಕರರು	13	7	6
ಒಟ್ಟು	**28**	**15**	**13**

(3)ಎಲ್ಲಾ ಪಶುವೈದ್ಯ ಸಂಸ್ಥೆಗಳಿಗೆ ಇತರೆ ಮೂಲಭೂತ ಸೌಲಭ್ಯಗಳಾದ ನೀರು, ವಿದ್ಯುತ್, ಪೀಠೋಪಕರಣ ಹಾಗೂ ಜಾನುವಾರು ಔಷಧಗಳನ್ನು ಒದಗಿಸಲಾಗಿರುತ್ತದೆ.

ಇ) ಯಾವುದೂ ಇರುವುದಿಲ್ಲ.

ಈ) (1) ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನಲ್ಲಿ 2007ರ ಜಾನುವಾರು ಗಣತಿಯ ಪ್ರಕಾರ 28,428 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದರಂತೆ 6 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇರುತ್ತದೆ; ಆದರೆ ತಾಲ್ಲೂಕಿನಲ್ಲಿ ಹಾಲಿ 7 ಪಶುವೈದ್ಯಕೀಯ ಸಂಸ್ಥೆಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ.

(2) ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ 2007ರ ಜಾನುವಾರು ಗಣತಿಯ ಪ್ರಕಾರ 63,249 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ

ಒಂದರಂತೆ 13 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇರುತ್ತದೆ; ಆದರೆ ತಾಲ್ಲೂಕಿನಲ್ಲಿ ಹಾಲಿ 18 ಪಶುವೈದ್ಯಕೀಯ ಸಂಸ್ಥೆಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ.

(3) ಈ ಮೇಲಿನ ಕಾರಣಗಳಿಂದ ಹಾಗೂ ರಾಜ್ಯದಲ್ಲಿ ಹಾಲಿ 717 ಪಶುವೈದ್ಯರ ಹುದ್ದೆಗಳು ಖಾಲಿ ಇದ್ದು, ಅರ್ಹ ಪದವೀಧರ ಪಶುವೈದ್ಯರ ಕೊರತೆ ಇರುವ ಕಾರಣ ಪ್ರಸಕ್ತ ಸಾಲಿನಲ್ಲಿ ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಪ್ರಸ್ತಾವನೆಯನ್ನು ಸರ್ಕಾರವು ಮುಂದೂಡಿದೆ.

ಊ) (1) ಜೊಯಿಡಾ ತಾಲ್ಲೂಕು ಕೇಂದ್ರದ ಪಶು ಆಸ್ಪತ್ರೆ ಕಟ್ಟಡ ಸುಸ್ಥಿತಿಯಲ್ಲಿರುತ್ತದೆ ಹಾಗೂ ವಸತಿ ಗೃಹಗಳು ಯಾವುದೂ ಇರುವುದಿಲ್ಲ.

(2) ಹಳಿಯಾಳ ತಾಲ್ಲೂಕು ಕೇಂದ್ರದ ಪಶು ಆಸ್ಪತ್ರೆ ಮತ್ತು ಸಹಾಯಕ ನಿರ್ದೇಶಕರವರ ವಸತಿ ಗೃಹ ಕಟ್ಟಡದ ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ, ಎಂದು ಗ್ರೂಪ್ –ಡಿ ವಸತಿ ಗೃಹಗಳಿದ್ದು, ಅವುಗಳ ದುರಸ್ಥಿ ಕಾರ್ಯವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಜಿಲ್ಲಾ ಪಂಚಾಯತ್ ನಿಧಿಯಿಂದ ಕೈಕೊಳ್ಳಲು ಕ್ರಮವಹಿಸಲಾಗುವುದು.

ಋ) ಜೊಯಿಡಾ –ಹುಳಿಯಾಳ ತಾಲ್ಲೂಕುಗಳಲ್ಲಿರುವ ಒಟ್ಟು ಜಾನುವಾರುಗಳ ಸಂಖ್ಯೆ:

ಜಾನುವಾರುಗಳ ವಿವರ	ಜೋಯಿಡಾ ತಾಲ್ಲೂಕು	ಹುಳಿಯಾಳ ತಾಲ್ಲೂಕು
ದನ	19052	41485
ಧನ	8224	20820

ಎಮ್ಮೆ	0	354
ಕುರಿ	843	3738
ಮೇಕೆ	0	0
ಕುದುರೆ	0	0
ಚಿಕ್ಕಕುದುರೆ	0	0
ಹೇಸರಗತ್ತೆ	0	0
ಕತ್ತೆಗಳು	0	0
ಒಂಟೆಗಳು	0	0
ಹಂದಿಗಳು	0	32
ನಾಯಿಗಳು	5647	6421
ಮೊಲಗಳು	6	58
ಒಟ್ಟು	33772	72908
ಕುಕ್ಕುಟಗಳು	106782	52911

ಋ) ಜೊಯಿಡಾ–ಹಳಿಯಾಳ ತಾಲ್ಲೂಕುಗಳ ಪಶುವೈದ್ಯ ಸಂಸ್ಥೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಶು ಚಿಕಿತ್ಸಾಲಯದ ವೈದ್ಯರುಗಳು ಪಶುಗಳಿಗೆ ನೀಡಿದ ಚಿಕಿತ್ಸೆ ಹಾಗೂ ಖಾಯಿಲೆಗಳ ವಿವರಗಳು:

ಖಾಯಿಲೆಗೆ ಸಂಬಂಧಿಸಿದ ಅಂಗಾಂಗಗಳು	ಚಿಕಿತ್ಸೆ ನೀಡಿದ ಸಂಖ್ಯೆ		
	2010–11	2011–12	2012–13 (2013 ಜನವರಿ ಅಂತ್ಯದವರೆಗೆ)
Respiratory	**25642**	**28992**	**26195**
Digestive	29098	32904	31470
Urogenital	3845	4330	3391
Nervous	4601	5192	4334
Circulatory	5575	6297	5725
Skeletal	9215	10396	8446
Endocrine	1984	2238	6748
Appendages	2545	2883	2949
Minor Surgery	1540	1742	1478
Major surgery	128	145	69
Total	84173	95119	90805

ಋಋ) ಕಳೆದ ಮೂರು ವರ್ಷಗಳಲ್ಲಿ ಸಾಂಕ್ರಾಮಿಕ ರೋಗಗಳಿಂದ ಯಾವುದೇ ಜಾನುವಾರುಗಳು ಮರಣ ಹೊಂದಿರುವುದಿಲ್ಲ.

ಎ) ಜೊಯಿಡಾ–ಹಳಿಯಾಳ ತಾಲ್ಲೂಕುಗಳಲ್ಲಿ–

1	ಒಟ್ಟು ಹಾಲು ಉತ್ಪಾದನೆ ಸರಾಸರಿ ದಿನವಹಿ	47,742 ಲೀಟರ್
2	ಮಾರುಕಟ್ಟೆಗೆ ಲಭ್ಯವಿರುವ ಒಟ್ಟು ಹಾಲಿನ	33,419 ಲೀಟರ್

	ಪ್ರಮಾಣ	
3	ಡೈರಿಗಳಿಗೆ ಸರಬರಾಜು ಆಗುವ ಹಾಲಿನ ಪ್ರಮಾಣ	996 ಲೀಟರ್
4	ಸ್ಥಳೀಯ ಮಾರುಕಟ್ಟೆಗೆ ಲಭ್ಯವಿರುವ ಹಾಲಿನ ಪ್ರಮಾಣ	32,423 ಲೀಟರ್

ಏ) (1) ಜೊಯಿಡಾ ತಾಲ್ಲೂಕಿನಲ್ಲಿ ಯಾವುದೇ ಹಾಲು ಉತ್ಪಾದಕರ ಸಹಕಾರ ಸಂಘಗಳು ಇಲ್ಲದೆ ಕಾರಣ ಪ್ರೋತ್ಸಾಹ ಧನ ನೀಡಲಾಗಿರುವುದಿಲ್ಲ.

(2) ಹಳಿಯಾಳ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಹಾಲಿಗಾಗಿ ಸರ್ಕಾರದಿಂದ ನೀಡಲಾಗಿರುವ ಸಹಾಯ ಧನದ ವಿವರ ಈ ಕೆಳಕಂಡಂತಿದೆ;

2010-11	ರೂ. 5,35,400/-
2011-12	ರೂ 4,59,462/-
2012-13	ರೂ 1,23,530/- (ಸೆಪ್ಟೆಂಬರ್ 2012ರ ವರೆಗೆ

ಸಂಖ್ಯೆ: ಪಸಂಮೀ 30 ಪಸಸೆ 2013

ಝಳಕಿ ಗ್ರಾಮದಲ್ಲಿ ಪಾಲಿಟೆಕ್ನಿಕ್ ಸಂಸ್ಥೆ
ಚುಕ್ಕೆ ಗುರುರಿಲ್ಲದ ಪ್ರಶ್ನೆ ಸಂಖ್ಯೆ 6 : (42)

ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) ಇಂಡಿ ತಾಲ್ಲೂಕಿನ ಝಳಕಿ ಗ್ರಾಮದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ)ಈ ಸಂಸ್ಥೆಯಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು;